ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 31 |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ |
| ಉತ್ತರಿಸುವ ದಿನಾಂಕ | 05.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದೇವಸ್ಥಾನಗಳ ಉಂಬಳಿ ಭೂಮಿಯನ್ನು ಭೂ ಸುಧಾರಣಾ ಕಾಯ್ದೆಯ ಅನ್ವಯ ಪಡೆದುಕೊಂಡು ಕೃಷಿ ಚಟುವಟಿಕೆ ನಡೆಸದೆ ಮಾರಾಟ ಮಾಡಿರುವ ಉದಾಹರಣೆಗಳು ಎಷ್ಟಿವೆ; (ಜಿಲ್ಲಾವಾರು ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ 34.565 ದೇವಸ್ಥಾನಗಳಿಗೆ ಸೇರಿದ ಜಮೀನುಗಳ ಪೈಕಿ ಬಹುತೇಕ ಇನಾಂಯೇತರ ಜಮೀನುಗಳು ಭೂಸುಧಾರಣಾ ಕಾಯ್ದೆಯಡಿಯಲ್ಲಿ ಸರ್ಕಾರಕ್ಕೆ ನಿಹಿತವಾಗಿದ್ದು, ಈ ಜಮೀನುಗಳು ವಿವಿಧ ಭೂ-ನ್ಯಾಯಮಂಡಳಿಗಳ ಆದೇಶಗಳನ್ವಯ (ಅಧಿಭೋಗದಾರಿಕೆ ಹಕ್ಕಿನ ಮಂಜೂರಾತಿ) ಪರಭಾರೆ ಮಾಡಲಾಗಿರುತ್ತದೆ.<br><br>ಭೂಸುಧಾರಣಾ ಕಾಯ್ದೆಯಡಿಯಲ್ಲಿ ಅಧಿಭೋಗದಾರಿಕೆ ಹಕ್ಕಿನ ಮಂಜೂರಾತಿ ಆದೇಶ ಹೊರಡಿಸುವಲ್ಲಿ ವಿವಿಧ ಭೂ-ನ್ಯಾಯಮಂಡಳಿಗಳಿಗೆ ಅಧಿಕಾರ ಪ್ರದತ್ತವಾಗಿರುವಂತೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪ ವಿಭಾಗಾಧಿಕಾರಿ/ ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆಯ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>ರಾಜ್ಯದ ಪ್ರಾದೇಶಿಕ ಆಯುಕ್ತರು/ಜಿಲ್ಲಾಧಿಕಾರಿಗಳ ವರದಿಯನುಸಾರ ದೇವಸ್ಥಾನಗಳ ಉಂಬಳಿ ಭೂಮಿಯನ್ನು ಭೂ ಸುಧಾರಣಾ ಕಾಯ್ದೆಯ ಅನ್ವಯ ಪಡೆದುಕೊಂಡು ಕೃಷಿ ಚಟುವಟಿಕೆ ನಡೆಸದೆ ಮಾರಾಟ ಮಾಡಿರುವ ಬಗ್ಗೆ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಆ) | ದೇವಸ್ಥಾನಗಳ ಉಂಬಳಿ ಭೂಮಿಯನ್ನು ಭೂ ಸುಧಾರಣಾ ಕಾಯ್ದೆಯ ಅನ್ವಯ ಪಡೆದುಕೊಂಡು ಕೃಷಿ ಚಟುವಟಿಕೆ ನಡೆಸದೆ ಇರುವ ಭೂಮಿಯನ್ನು ಹಿಂಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. | |
| ಇ) | ದೇವಸ್ಥಾನಗಳ ಉಂಬಳಿ ಭೂಮಿಯು ಅನ್ಯ | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ |

| | | |
|---|---|---|
| | ಮತೀಯರು ಖರೀದಿಸಿ ದೇವಸ್ಥಾನದ ಸ್ಥಳದ ಸಮೀಪವೇ ಆ ಮತೀಯರ ಪ್ರಾರ್ಥನಾ ಸ್ಥಳಗಳನ್ನು ನಿರ್ಮಿಸಿರುವ ಎಷ್ಟು ಪ್ರಕರಣಗಳು ವರದಿಯಾಗಿವೆ. | ದೇವಸ್ಥಾನಗಳ ಉಂಬಳಿ ಭೂಮಿಯನ್ನು ಅನ್ಯ ಮತೀಯರು ಖರೀದಿಸಿ ದೇವಸ್ಥಾನದ ಸ್ಥಳದ ಸಮೀಪವೇ ಆ ಮತೀಯರ ಪ್ರಾರ್ಥನಾ ಸ್ಥಳಗಳನ್ನು ನಿರ್ಮಿಸಿರುವ ಯಾವುದೇ ಪ್ರಕರಣಗಳು ಪ್ರಸಕ್ತ ವರದಿಯಾಗಿರುವುದಿಲ್ಲ. |
| ಈ) | ಒಂದು ಬಾರಿ ದೇವಸ್ಥಾನದ ಭೂಮಿ ಎಂದು ಪರಿಗಣಿಸಿದ ಬಳಿಕ ಅದು ಯಾವುದೇ ಕಾಲದಲೂ ದೇವಸ್ಥಾನದ ಭೂಮಿಯೇ ಆಗಿರುವಂತೆ ಮಾಡಲು ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆ; ಈ ಕುರಿತು ಹೊಸ ಕಾನೂನು ಜಾರಿಗೆ ತರಲು ಸರ್ಕಾರ ಚಿಂತನೆ ನಡೆಸಿದೆಯೇ; ನಡೆಸಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು? | ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚಿತ ದೇವಾಲಯಗಳ ಪಟ್ಟಿಯಲ್ಲಿರುವ ದೇವಾಲಯ/ಸಂಸ್ಥೆಯ ಹೆಸರನ್ನು ಮ್ಯೂಟೇಷನ್ ಮತ್ತು ಆರ್.ಟಿ.ಸಿ ಯಲ್ಲಿ ನಮೂದಿಸುವಾಗ **"ದೇವಸ್ಥಾನ ಹೆಸರು"** ಮತ್ತು **"ಧಾರ್ಮಿಕ ದತ್ತಿ ಇಲಾಖೆ"** ಎಂದು ನಮೂದಿಸಲು ಈಗಾಗಲೇ ಸರ್ಕಾರದ ಪತ್ರ ಸಂಖ್ಯೆ:ಕಂಇ 49 ಮುಅಬಿ 2021, ದಿನಾಂಕ:11.11.2021ರ ಸೂಚನೆಯಂತೆ ದೇವಾಲಯದ ಆಸ್ತಿಗಳ ಸರ್ವೆ ಕಾರ್ಯ ಕೈಗೊಂಡು ದೇವಾಲಯಕ್ಕೆ ಸೇರಿದ ಜಮೀನುಗಳ ಮ್ಯೂಟೇಷನ್ ಮತ್ತು ಆರ್.ಟಿ.ಸಿ.ಯಲ್ಲಿ ನಮೂದಿಸುವಾಗ **"ದೇವಸ್ಥಾನ ಹೆಸರು"** ಮತ್ತು **"ಧಾರ್ಮಿಕ ದತ್ತಿ ಇಲಾಖೆ"** ಎಂದು ನಮೂದಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಇದರಿಂದಾಗಿ ಒಂದು ಬಾರಿ ದೇವಸ್ಥಾನದ ಭೂಮಿ ಎಂದು ಪರಿಗಣಿಸಿದ ಬಳಿಕ ಅದು ಯಾವುದೇ ಕಾಲದಲೂ ದೇವಸ್ಥಾನದ ಭೂಮಿಯೇ ಆಗಿರುವಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. |

ಸಂಖ್ಯೆ: ಕಂಇ 10 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು